ತೂಕದ ಮಾತು

ಸಣ್ಣ ಸಂಗತಿಗಳನ್ನು ಉಪೇಕ್ಷಿಸಲಾಗುವುದಿಲ್ಲ. ಪೆನ್ನು ಕಳೆದುಹೋದರೆ ಹೊಸತು ಕೊಳ್ಳಬಹುದು. ಆದರೆ ಪೆನ್ನಿನ ಮುಚ್ಚಳ ಕಳೆದುಕೊಂಡರೆ ಪೆನ್ನನ್ನು ಬಿಸಾಕಲಾಗದ, ಇಟ್ಟುಕೊಳ್ಳಲೂ ಆಗದ ಸಂಕಟ.

ಕೇಳ್ರಪ್ಪೋ ಕೇಳಿ

■ ಬಾಣಭಟ್ಟ

1 ವಿ. ಹೇಮಂತಕುಮಾರ್, ಬೆಂಗಳೂರು, 9035992900
ಹೆಣ್ಣು ದೇವತೆಯಾಗುವುದು ಯಾವಾಗ ಸಾರ್?
ಗಂಡ ಹೇಳುವುದನ್ನು ಕೇಳಿದಾಗ ಎಂದು ಬಾಯಿಬಿಟ್ಟು ಹೇಳಬೇಕಾ?!

2 ಫ್ಯಾಷನ್ ಡಿಸೈನರ್ ಮಧು, 9945737427
ಅವಮಾನದ ಕರಿನೆರಳಿನಲ್ಲಿ ನಿಲ್ಲುವುದಕ್ಕಿಂತಾ ಅಭಿಮಾನದ ಹೊಂಬಿಸಿಲಿನಲ್ಲಿ ನಿಲ್ಲುವುದು ಲೇಸಲ್ಲವೇ?
ಬಳ್ಳಾರಿ ಸುಡುಬಿಸಿಲಿನಲ್ಲಿ ನಿಂತು ಈ ಮಾತನ್ನು ಹೇಳಬೇಕಿತ್ತು!

3 ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
ಬಾತ್ ರೂಂಗಳಲ್ಲಿ ಅದ್ಭುತವಾಗಿ ಹಾಡುವ ಕೆಲ ಮಂದಿ, ವೇದಿಕೆ ಮೇಲೆ ಹಾಡಲು ಹಿಂಜರಿಯುತ್ತಾರಲ್ಲ?
ವೇದಿಕೆಯನ್ನು ಬಾತ್‌ರೂಂ ಎಂದು ಭಾವಿಸಲು ಹೇಳು!

4 ಓಂ ಚನ್ನೇಶ್ ಅರಬಿಳಚಿ ಕ್ಯಾಂಪ್, ಭದ್ರಾವತಿ, 9901257131
ನರ್ಸ್‌ಗಳ ಬಗ್ಗೆ ಪ್ರಶ್ನೆಗೆ ಉತ್ತರಿಸಬೇಕಾದರೆ ನೀವು ಯಾರದ್ದಾದರು ‘ಪರ್ಮಿಷನ್’ ತೊಗೋಬೇಕಾ ಭಟ್ರೇ?
ಆ ನೆಪದಲ್ಲಾದರೂ ಅವಳನ್ನು ಭೇಟಿಯಾಗಬಹುದಲ್ಲ!

5 ಕೊಕ್ಕಡ ವಂಕಟ್ರಮಣ ಭಟ್, ಮಂಡ್ಯ, 9972448183
ಭಟ್ರೇ ‘ಅರ್ಧ ಕಾಫಿ’ ಕುಡಿದ್ರೆ ಫುಲ್ ಮಜಾ ಸಿಗುತ್ತೆ ಅಂತ ಕೆಲವರು ಭಾರೀ ಜೋರಾಗಿ ಹಾಡ್ತಿದ್ದಾರೆ! ‘ಫುಲ್ ಕಾಫಿ’ ಕುಡಿದರೆ?
ಕಾಫಿ ಕುಡಿದೇ ನಿಮಗೆ ಕಿಕ್ ಬಂದಂತಿದೆಯಲ್ಲ!

ತಪ್ಪಾಯ್ತು ತಿದ್ಕೋತೀವಿ

■ ವಿಶ್ವೇಶ್ವರ ಭಟ್

ಮೈಸೂರಿನ ಜೆ.ಪಿ.ನಗರದಿಂದ ಬ್ಯಾಂಕ್ ಶಿವಕುಮಾರ ಅವರು ಹಲವು ತಿಂಗಳುಗಳ ನಂತರ ಪತ್ರ ಬರೆದಿದ್ದಾರೆ. ಅವರು ಬರೆಯುತ್ತಾರೆ– ‘ಜ.8ರಂದು (ಪುಟ 4 ಚಾಮರಾಜನಗರ ಆವೃತ್ತಿ) ನಿಮ್ಮ ವರದಿಗಾರರು ಒಂದು ಸಣ್ಣ ತಪ್ಪಲ್ಲ. ಬಹಳ ದೊಡ್ಡ ತಪ್ಪನ್ನೇಮಾಡಿದ್ದಾರೆ. ವರದಿಯ ಸಾರಾಂಶ ಹೀಗಿದೆ... ‘ಸಣ್ಣವರ ಟೀಕೆಗೆ ಉತ್ತರಿಸಲ್ಲ: ಕಾಪುಸಿ’ ಶೀರ್ಷಿಕೆ ಅಡಿಯಲ್ಲಿ ಮಾನ್ಯ ಕಾಪುಸಿಯವರು ಜ.9ರಂದು ಮುಖ್ಯಮಂತ್ರಿ ಶೆಟ್ಟರ್ ಅವರು ಜಿಲ್ಲೆಗೆ ಭೇಟಿನೀಡುವ ಹಿನ್ನೆಲೆಯಲ್ಲಿ ಸಿದ್ಧತಾ ಕಾರ್ಯಕ್ರಮಗಳ ಪರಿಶೀಲನೆಗಾಗಿ ಚಾಮರಾಜನಗರಕ್ಕೆ ಆಗಮಿಸಿರುವ ಅವರು, ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಈಗ ಅವರು (ಅಂದರೆ ಕಾಪುಸಿಯವರು) ರಾಜ್ಯಮಟ್ಟದ ನಾಯಕರಾಗಿರುವುದರಿಂದ ಸಣ್ಣಪುಟ್ಟವರ ಟೀಕೆಗೆ ಉತ್ತರಿಸಲ್ಲ ಎಂಬುದು ಸುದ್ದಿಯ ಸಾರಾಂಶ.’

‘ಆದರೆ ಎಲ್ಲಿಯ ಕಾಪುಸಿ, ಎಲ್ಲಿಯ ಶೆಟ್ಟರ್. ಶೆಟ್ಟರ್ ಅವರ ಚಾಮರಾಜನಗರ ಭೇಟಿಯನ್ನು ಕಾಪುಸಿಯವರು ಪರಿಶೀಲಿಸಲು ಬಂದಿದ್ದಾರೆಂಬ ವರದಿಯನ್ನು ಮಾನ್ಯಶ್ರೀ ಯಡಿಯೂರಪ್ಪನವರು ಓದಿದರೆ, ಕಾಪುಸಿ ಗತಿ ಏನಾಗುತ್ತದೆಂಬುದನ್ನು ನೀವೇ ಹೇಳಿ. ಈ ವರದಿಯನ್ನು ಸ್ಪಷ್ಟಪಡಿಸಿ, ಕಾಪುಸಿಯನ್ನು ಕಾಪಾಡಿ’ ಎಂದಿದ್ದಾರೆ.


ಸಣ್ಣವರ ಟೀಕೆಗೆ ಉತ್ತರಿಸಲ್ಲ: ಕಾಪುಸಿ

ಚಾಮರಾಜನಗರ: ನಾನೊಬ್ಬ ರಾಜ್ಯಮಟ್ಟದ ನಾಯಕ. ಸಣ್ಣಪುಟ್ಟವರ ಟೀಕೆಗೆ ಉತ್ತರಿಸುವ ಅವಶ್ಯಕತೆ ನನಗಿಲ್ಲ ಎಂದು ಕೆಜೆಪಿ ಕಾರ್ಯದರ್ಶಿ ಕಾ.ಪು. ಸಿದ್ದಲಿಂಗ ಸ್ವಾಮಿ ಕಿಡಿಕಾರಿದ್ದಾರೆ. ಸಿಎಂ ಶೆಟ್ಟರ್ ಜ.9ರಂದು ಜಿಲ್ಲೆಗೆ ಭೇಟಿ ನೀಡುವ ಹಿನ್ನೆಲೆಯಲ್ಲಿ ಸಿದ್ಧತಾ ಕಾರ್ಯಕ್ರಮಗಳ ಪರಿಶೀಲನೆಗಾಗಿ ಚಾಮರಾಜನಗರಕ್ಕೆ ಆಗಮಿಸಿರುವ ಅವರು ಜಿಲ್ಲಾ

ಕಾಪುಸಿದ್ದಲಿಂಗಸ್ವಾಮಿಯನ್ನು ಕಾಪುಸಿ ಎನ್ನಲಾಗಿದೆ. ಅವರು ಯಡಿಯೂರಪ್ಪನವರ ಆಪ್ತ ಎಂಬುದು ಗೊತ್ತಿರುವ ಸಂಗತಿ. ಹೀಗಾಗಿ ಅವರು ಮುಖ್ಯಮಂತ್ರಿ ಜಗದೀಶ ಶೆಟ್ಟರ್ ಅವರ ಆಗಮನದ ಸಿದ್ಧತೆಗಳ ವೀಕ್ಷಣೆಗೆ ಆಗಮಿಸಿದ್ದರು ಎಂಬುದು ಸರಿಯಲ್ಲ. ಕಾಪುಸಿ ವ್ಯಂಗ್ಯವಾಗಿ ಹಾಗೆ ಹೇಳಿರಬಹುದು. ಅದನ್ನೇ ವರದಿಗಾರರು ಬರೆದಿದ್ದಾರೆ.

ಹಾಸನದಿಂದ ಮಧುಸೂದನ್ ಅವರು ಬರೆಯುತ್ತಾರೆ– ‘ಜ.6ರ ಪತ್ರಿಕೆಯಲ್ಲಿ (ಹಾಸನ ಅವೃತ್ತಿ ಪುಟ 3) ‘ಇಹಲೋಕ ತ್ಯಜಿಸಿದ ಕೆ.ಬಿ. ಮಲ್ಲಪ್ಪ’ ಎಂಬ ಸುದ್ದಿ ಪ್ರಕಟವಾಗಿದೆ. ಮುಖ್ಯ ಶೀರ್ಷಿಕೆಯ ಕೆಳಗೆ ‘ಆಜಾತ ಶತೃ’ ಎಂದು ಬರೆಯಲಾಗಿದೆ. ನೀವು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಕುರಿತು ‘ಆಜಾತಶತ್ರು’ ಪುಸ್ತಕ ಬರೆದಿದ್ದಿರಿ. ಅಲ್ಲಿ ನೋಡಿದರೆ ‘ಆಜಾತಶತ್ರು’ ಎಂದಿದೆ. ನಿಮ್ಮದೇ ಪತ್ರಿಕೆಯಲ್ಲಿ ‘ಆಜಾತ ಶತೃ’ ಎಂದಿದೆ. ಆಜಾತ ಮತ್ತು ಶತ್ರು ಶಬ್ದದ ನಡುವೆ ಅಂತರದ ಅಗತ್ಯವಿಲ್ಲ. ಕಾರಣ ‘ಅಜಾತಶತ್ರು’ ಎಂಬುದು ಒಂದೇ ಶಬ್ದ.’

‘ಇದೇ ಸುದ್ದಿಯ 3ನೇ ಪ್ಯಾರಾದಲ್ಲಿ ‘1964ರಿಂದ 72ರವರೆಗೆ 6 ವರ್ಷಗಳಕಾಲ ಅಧ್ಯಕ್ಷರಾಗಿಯೂ ಸೇವೆಸಲ್ಲಿಸಿದ್ದಾರೆ’ ಎಂದಿದೆ. 1964ರಿಂದ 72ಕ್ಕೆ ಎಂಟು ವರ್ಷಗಳಾಗುತ್ತವೆ. ನಿಮ್ಮವರು ಒಂದೇ ಇಸವಿ ತಪ್ಪು ಬರೆದಿದ್ದಾರೆ. ಇಲ್ಲವಾದಲ್ಲಿ ಲೆಕ್ಕತಪ್ಪಿದ್ದಾರೆ. ನಾನು ಗಮನಿಸಿದಂತೆ ‘ಕನ್ನಡಪ್ರಭ’ದಲ್ಲಿ ಯಾವಾಗಲೂ ಇಸವಿ ಮತ್ತು ಲೆಕ್ಕದಲ್ಲಿ ಹೆಚ್ಚು ತಪ್ಪುಗಳು ನುಸುಳುತ್ತವೆ. ಕ್ರೀಡಾಸುದ್ದಿಯಲ್ಲೂ ಲೆಕ್ಕತಪ್ಪಿದ ತಪ್ಪುಗಳೇ ಹೆಚ್ಚಿರುತ್ತವೆ’ ಎಂದಿದ್ದಾರೆ.

ಹಿರಿಯರ ಹಾದಿ

■ ಪ್ರೊ. ಎಂ. ಎನ್. ಸುಂದರರಾಜ್, ಶಿವಮೊಗ್ಗ

ಹಯಾತ್ ಸಾಹೇಬರ ಜಾತ್ಯತೀತ ಮನೋಭಾವ

1930ರಲ್ಲಿ ದೇವನೂರಿನಲ್ಲೊಬ್ಬರು ಪಟೇಲ್ ಮಹಮ್ಮದ್ ಹಯಾತ್ ಸಾಬ್ ಎಂಬ ಮುಸಲ್ಮಾನರಿದ್ದರು. ಅವರು ಮೂಲತಃ ಕೇರಳದವರು. ದೇವನೂರಿನ ದೊಡ್ಮನೆ ರಾಘವಯ್ಯಂಗಾರರ ಮನೆಯ ದನ ಕಾಯುವ ಕೆಲಸಕ್ಕೆ ಸೇರಿದರು. ಊರ ಪಟೇಲ್‌ಗಿರಿಗಾಗಿ ಪೈಪೋಟಿ ಬಿದ್ದಾಗ ರಾಘವಯ್ಯಂಗಾರರು ಹಯಾತ್ ಸಾಬರನ್ನೇ ಪಟೇಲರನ್ನಾಗಿ ಮಾಡಿದರು. ದನಕಾಯುತ್ತಿದ್ದ ಹಯಾತ್ ಕಷ್ಟಪಟ್ಟು ದುಡಿದು ದೊಡ್ಡ ಜಮೀನುದಾರರಾದರು. ದೇವನೂರು, ‘ಪಟೇಲ್ ಹಯಾತ್ ಸಾಹೇಬರ’ ಊರು ಎಂದು ಕರೆಸಿಕೊಳ್ಳುವಷ್ಟರ ಮಟ್ಟಿಗೆ ಅವರ ಹೆಸರು ಪ್ರಸಿದ್ಧಿ ಪಡೆಯಿತು. ಒಮ್ಮೆ ಡಿವಿಜಿ, ವಿಸೀ, ಮಾಸ್ತಿ, ಬೇಂದ್ರೆ, ಎಂ.ಆರ್.ಶ್ರೀ., ಕೆ.ವೆಂಕಟರಾಮಪ್ಪ ಮುಂತಾದವರನ್ನು ದೇವನೂರಿಗೆ ಕರೆಸಿದ ಹಯಾತ್ ಸಾಬ್ ಮೂರು ದಿನ ಲಕ್ಷ್ಮೀಶ ಜಯಂತಿ ಕಾರ್ಯಕ್ರಮವನ್ನು ಅದ್ದೂರಿಯಿಂದ ಮಾಡಿದರು. ತಮ್ಮ ಮನೆ ಮದುವೆಗೆ ತರಿಸಿದ್ದ ಉತ್ಕೃಷ್ಟ ಬಗೆಯ ಅಕ್ಕಿಯನ್ನು ಸಮಾರಂಭಕ್ಕೆ ನೀಡಿದ್ದೂ ಆಯಿತು. ಅತ್ಯಂತ ಸೊಗಸಾಗಿ ಕಾರ್ಯಕ್ರಮ ನಡೆಯಿತು. ಎಲ್ಲರೂ ಹಯಾತ್ ಅವರನ್ನು ಶ್ಲಾಘಿಸುವವರೇ. ಕೊನೆಗೊಂದು ದಿನ ಲೆಕ್ಕಪತ್ರಗಳ ಮಂಡನೆಯಾಗಿ, ಮೊದಲ ದಿನದ ಖರ್ಚು ಆರುನೂರನ್ನು ಹಯಾತ್ ಸಾಹೇಬರು ನೀಡಬೇಕಂತಲೂ, ಎರಡನೆ ದಿನದ ಖರ್ಚು ಸಾವಿರ ರುಪಾಯಿಯನ್ನು ಸಂಘದವರು ಭರಿಸಬೇಕೆಂತಲೂ, ಮೂರನೇ ದಿನದ ಕಾರ್ಯಕ್ರಮದ ಖರ್ಚು ಎರಡು ಸಾವಿರ ರುಪಾಯಿ ಬೇರೆ ಇನ್ಯಾರದ್ದೋ ಎನ್ನುವ ತೀರ್ಮಾನವಾಯಿತು. ಆದರೆ ಹಯಾತ್ ಸಾಹೇಬರಿಗೆ ಇದು ಸಮ್ಮತವಾಗಲಿಲ್ಲ. ಎಲ್ಲರಿಗೂ ಆಶ್ಚರ್ಯ. ಕಾರಣ ಕೇಳಿದಾಗ, ‘ನಾನು ಕೇವಲ ಆರುನೂರಕ್ಕೆ ಬಾಳಿದವನೆ? ಮೂರೂ ದಿನದ ಖರ್ಚು ನನ್ನ ಹೆಸರಿಗೇ ಬರೆಯಿರಿ’ ಎಂದು ಹೇಳಿ ಹೃದಯ ವೈಶಾಲ್ಯತೆ ಮೆರೆದರು. ಗಣೇಶನ ಹಬ್ಬ ಬಂದರಂತೂ ಹಯಾತ್ ಸಾಹೇಬರದೇ ನೇತೃತ್ವ. ಕೊನೆಯ ದಿನದ ಮೆರವಣಿಗೆ, ಪ್ರಸಾದ ಎಲ್ಲದರ ಖರ್ಚೂ ಅವರದ್ದೆ. ಶೃಂಗೇರಿ ಜಗದ್ಗುರುಗಳು ದೇವನೂರಿಗೆ ಬಂದಾಗಲೂ ಅವರಿಗೆ ಬೆಳ್ಳಿಯ ತಟ್ಟೆಯಲ್ಲಿ ಫಲ ತಾಂಬೂಲ ಮತ್ತು ಇನ್ನೂರು ರುಪಾಯಿಗಳನ್ನಿಟ್ಟು ಸತ್ಕರಿಸಿದರು. ಬಾಬಯ್ಯನ ಹಬ್ಬದ ಎಂಟುದಿನವೂ ಜೈಮಿನಿ ಭಾರತದ ಪಾರಾಯಣ, ವರ್ಷವಿಡೀ ಹರಿಕಥೆ ನಡೆಸಲಾಗುತ್ತಿತ್ತು.

ಇದು ಅವರ ನಿರಹಂಕಾರಯುತವಾದ ನಡವಳಿಕೆಯನ್ನೂ, ಜಾತ್ಯತೀತ ಮನೋಭಾವನೆಯನ್ನೂ, ಕರ್ತವ್ಯನಿಷ್ಠೆಯನ್ನೂ ತೋರಿಸುತ್ತದೆ. ಇಂತಹ ವ್ಯಕ್ತಿಗೆ ಆ ಊರಿನ ದೇವಾಲಯದ ಒಳಗೆ ಪ್ರವೇಶ ನೀಡದೆ ಪ್ರತಿಬಂಧಿಸಿದ್ದು ಮಾತ್ರ ಕ್ರೂರತನದ ದ್ಯೋತಕವಾಗಿತ್ತು. ಇದನ್ನು ಬೆಳಗೆರೆ ಕೃಷ್ಣಶಾಸ್ತ್ರಿಗಳು ತಮ್ಮ ‘ಮರೆಯಲಾದೀತೆ’ ಕೃತಿಯಲ್ಲಿ ಸೊಗಸಾಗಿ ನಿರೂಪಿಸಿದ್ದಾರೆ.

ಕಿರುನಗೆ

ಮರಿಕೋಲ್ಯ: ಹಲೋ ಪಮ್ಮಿ ಡಾರ್ಲಿಂಗ್ ಹೇಗಿದೀಯಾ?
ಹುಡುಗಿ: ನೀನು ಮರಿ ಕೋಲ್ಯ ಅಲ್ವ?
ಮರಿಕೋಲ್ಯ: ಅರೆ ನಿನಗೆ ಹೇಗೆ ಗೊತ್ತಾಯ್ತು?
ಹುಡುಗಿ: ನಿಮ್ಮಪ್ಪನ ಹೆಸರು ಕೋಲ್ಯ, ನಿನ್ನ ಅಜ್ಜನ ಹೆಸರು ತಿಮ್ಮಣ್ಣ, ನಿನ್ನ ಮುತ್ತಜ್ಜನ ಹೆಸರು ರಾಮ್ ಲಾಲ್ ತಾನೆ?
ಮರಿಕೋಲ್ಯ: ಅರೆ ನಿನಗೆ ಹೇಗೆ ಗೊತ್ತಾಯ್ತು ಪಮ್ಮಿ ಡಾರ್ಲಿಂಗ್?
ಹುಡುಗಿ: ಕಳ್‌ನನ್ ಮಗನೇ, ನೀನು ಫೋನ್ ಮಾಡಿರೋದು ಪಮ್ಮಿಗಲ್ಲ, ‘ಮಮ್ಮಿ’ಗೆ. ಮನೆಗೆ ಬಾ..ಇದೆ ನಿನಗೆ ಹಬ್ಬ!

ಬೇಜವಾಬ್ದಾರಿ ನಡೆ ಮಾಧ್ಯಮಗಳದ್ದಲ್ಲವೇ?

ಮೋಹನ್ ಭಾಗವತ್ ಅವರ ಪ್ರಕರಣ, ಭಾರತದ ಮಾಧ್ಯಮಗಳೂ ಕೂಡ ಅನೈತಿಕ ಮಾರ್ಗದಲ್ಲಿ ನಡೆಯುತ್ತಿವೆ ಎನ್ನುವುದನ್ನು ಇನ್ನೊಮ್ಮೆ ಸಾಬೀತು ಮಾಡಿದೆ. ರಾಡಿಯಾಗೇಟ್ ವಿಷಯದ ಬಗ್ಗೆ ಅವು ನಡೆದುಕೊಂಡ ರೀತಿ ನೋಡಿದಾಗ, ಅವು ಹದ್ದು ಮೀರಿ ವರ್ತಿಸುತ್ತಿವೆ ಎನ್ನುವುದು ಸಾಬೀತಾಗಿತ್ತು. ಒಂದು ಬಾರಿ ನಾಚಿಕೆ ಬಿಟ್ಟ ವ್ಯಕ್ತಿ, ಮುಂದಿನ ಬಾರಿ ಅದಕ್ಕಿಂತಲೂ ಹೀನ ಕೆಲಸಕ್ಕೆ ಮುಂದಾಗುತ್ತಾನೆ ಎನ್ನುವುದಕ್ಕೆ ಇವುಗಳ ವರ್ತನೆಯೇ ಸಾಕ್ಷಿ. ಇದೂ ಒಂದು ರೀತಿಯಲ್ಲಿ ಮಾದಕ ವ್ಯಸನದಂತೆಯೇ? ನನಗೂ ಸ್ಪಷ್ಟವಾಗಿ ಗೊತ್ತಿಲ್ಲ. ಬರ್ಖಾದತ್‌ರಂಥವರನ್ನು ಕೇಳಿದರೆ ಉತ್ತರ ದೊರಕೀತು!. ಈಗ ಮಾಧ್ಯಮಗಳ ‘ಹಾಲ್ ಆಫ್ ಶೇಮ್’ನಲ್ಲಿ ಹೊಸತಾಗಿ ಸೇರ್ಪಡೆಯಾಗಿರುವುದು ಏಷಿಯನ್ ನ್ಯೂಸ್ ಇಂಟರ್ನ್ಯಾಷನಲ್(ಎಎನ್‌ಐ) ಸಂಸ್ಥೆ. ಮೋಹನ್ ಭಾಗವತ್‌ರ ಭಾಷಣವನ್ನು ತಿರುಚಿ, ತಾನು ತೋರಿಸಿದ್ದೇ ಭಾಗವತ್‌ರ ನೈಜ ದೃಷ್ಟಿಕೋನ ಎಂಬಂತೆ ಬಿಂಬಿಸಿಬಿಟ್ಟಿತು.

ಸಹಜವಾಗಿಯೇ ನಿರೀಕ್ಷಿತ ಪರಿಣಾಮಗಳು ಎದುರಾದವು. ಇಂಗ್ಲಿಷ್ ಸುದ್ದಿವಾಹಿನಿಗಳೆಲ್ಲವೂ ಈ ಸುದ್ದಿಯನ್ನು ಹಿಡಿದುಕೊಂಡು ಹುಚ್ಚೆದ್ದು ಕುಣಿದವು. ಮೊದಲೇ ತಿರುಚಲಾಗಿದ್ದ ಸುದ್ದಿಯಲ್ಲಿ ಎನ್‌ಡಿಟಿವಿ ಎನ್ನುವ ‘ತಿರುಚು ತಜ್ಞ’ ಯಾವ ರೀತಿಯಲ್ಲಿ ಕೈಯಾಡಿಸಿತು ಎನ್ನುವುದಕ್ಕೆ ಇಲ್ಲೊಂದು ಚಿಕ್ಕ ಉದಾಹರಣೆ: ‘ಮಹಿಳೆಯರು ಇರುವುದು ಮನೆಗೆಲಸ ಮಾಡುವುದಕ್ಕೆ’: ಆರ್‌ಎಸ್‌ಎಸ್ ಮುಖಂಡನಿಂದ ಆಘಾತಕಾರಿ ಹೇಳಿಕೆ...ಬಲಪಂಥೀಯ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮುಖ್ಯಸ್ಥ ಮೋಹನ್ ಭಾಗವತ್ ಮತ್ತೊಮ್ಮೆ ತಮ್ಮ ಹಳೆ ಚಾಳಿಯನ್ನು ಮುಂದುವರಿಸಿದ್ದಾರೆ.... ಹಾಗಿದ್ದರೆ ನಿಜಕ್ಕೂ ಭಾಗವತ್ ಹೇಳಿದ್ದಾದರೂ ಏನು? ಅವರು ಪಾಶ್ಚಿಮಾತ್ಯ ಮಾದರಿಯ ಆಧುನಿಕತೆಯ ಬಗ್ಗೆ ಮಾತನಾಡುತ್ತಾ, ‘ಮದುವೆಯ(ಅವರ ಅಭಿಪ್ರಾಯವಲ್ಲ) ‘ಆಧುನಿಕ’ ವ್ಯಾಖ್ಯಾನದಲ್ಲಿ, ಹೆಂಡತಿಯಾದವಳು ಗಂಡನ ಸೇವೆ ಮಾಡಿಕೊಂಡಿರುವ ಒಪ್ಪಂದಕ್ಕೆ ಒಳಪಟ್ಟಿರುತ್ತಾಳೆ. ಗಂಡ ಆಕೆಯ ಯೋಗಕ್ಷೇಮ ನೋಡಿಕೊಳ್ಳಬೇಕು. ಒಂದು ವೇಳೆ ಇಬ್ಬರಲ್ಲಿ ಒಬ್ಬರು ತಮ್ಮ ಜವಾಬ್ದಾರಿ ನಿರ್ವಹಿಸುವಲ್ಲಿ ಸೋತರೆ, ಆಧುನಿಕ ಮದುವೆ ಒಪ್ಪಂದದ ಪ್ರಕಾರ ಅತೃಪ್ತರು ಈ ಒಪ್ಪಂದವನ್ನು ಮುರಿದು, ಇನ್ನೊಬ್ಬರೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದು’ ಎಂದಿದ್ದರು.

ಆದರೆ ಈ ಸುದ್ದಿಯನ್ನು ಹೇಗೆ ವರದಿಮಾಡಲಾಯಿತು ಮತ್ತು ಮಾಧ್ಯಮಗಳಲ್ಲಿ ಈ ಸುದ್ದಿ ಎಷ್ಟೊಂದು ವೇಗವಾಗಿ ಹರಿದಾಡತೊಡಗಿತು ಎನ್ನುವುದನ್ನೊಮ್ಮೆ ನೆನಪಿಸಿಕೊಳ್ಳಿ. ಅಲ್ಲದೆ ಮೋಹನ್ ಭಾಗವತ್‌ರ ಪರವಾಗಿ ಮಾತನಾಡಿದ ಆರ್‌ಎಸ್‌ಎಸ್‌ನ ವಕ್ತಾರ ರಾಮ್‌ಮಾಧವ್ ಹೇಳಿಕೆಯನ್ನು ಎಷ್ಟೊಂದು ಜಾಗೃತಿಯಿಂದ ಈ ಮಾಧ್ಯಮಗಳು ತಮ್ಮ ಸುಳ್ಳು ಸುದ್ದಿಯ ವಾಕ್ಯವೃಂದದಡಿಯಲ್ಲಿ ಹೂತುಹಾಕಿಬಿಟ್ಟವೋ ನೋಡಿ. ‘ಉಗುಳಿ ಓಡಿಹೋಗುವ ಪತ್ರಿಕೋದ್ಯಮ’ ಇಂತಹ ಕೆಲಸ ಮಾಡಿಕೊಂಡೇ ಬದುಕುಳಿದಿದೆ. ಆದರೆ ತಮ್ಮ ವಿರುದ್ಧ ಟ್ವಿಟರ್ ಮತ್ತು ಮತ್ತಿನ್ನಿತರ ಸಾಮಾಜಿಕ ಜಾಲತಾಣದಲ್ಲಿ ವಿರೋಧದ ಜ್ವಾಲಾಮುಖಿ ಏಳಲಿದೆ ಎನ್ನುವುದು ಮಾಧ್ಯಮ ಮಂದಿಗೆ ಗೊತ್ತಿರಲಿಲ್ಲ. ಈ ಮೀಡಿಯಾ ರಾಕ್ಷಸರು ಆರ್‌ಎಸ್‌ಎಸ್ ಅನ್ನು ಏಕಿಷ್ಟು ದ್ವೇಷಿಸುತ್ತಾರೆ ಎನ್ನುವುದನ್ನು ಕೇವಲ ಅವರ ಹಿನ್ನೆಲೆಯನ್ನು ನೋಡಿ ತಿಳಿದುಕೊಳ್ಳಲಾಗದು. ಸತ್ಯವೇನೆಂದರೆ ಈ ನ್ಯೂಸ್ ಚಾನೆಲ್ಲುಗಳಿಗೆ ನಿಯತ್ತೆಂಬುದೇ ಇಲ್ಲ. ಪರ್ವತದಷ್ಟು ಸಾಕ್ಷಿಯನ್ನು ನೀವು ಅವರೆದುರಿಗಿಡಿ, ಆದರೂ ಅವರ ಕಣ್ಣು ಅದನ್ನು ನಿರ್ಲಕ್ಷಿಸುತ್ತದೆ. ಆರ್‌ಎಸ್‌ಎಸ್‌ನ ವಿರುದ್ಧದ ಅವರ ದ್ವೇಷಕ್ಕೆ ಮುಖ್ಯ ಕಾರಣ ಮುಖ್ಯವಾಗಿ ಭಯ!

ಆರ್‌ಎಸ್‌ಎಸ್ ಇದುವರೆಗೂ ಮಾಡಿಕೊಂಡು ಬಂದಿರುವ ಸಮಾಜ ಸೇವೆಗೆ ಮಾಧ್ಯಮಗಳು ಯಾವಾಗಲೂ ಜಾಣ ಕುರುಡು ಪ್ರದರ್ಶಿಸಿವೆ. ಆರ್‌ಎಸ್‌ಎಸ್ ಅಸ್ತಿತ್ವದಲ್ಲಿರುವುದೇ ಹಿಂಸಾಚಾರ ಹುಟ್ಟುಹಾಕಲು ಮತ್ತು ಅಲ್ಪಸಂಖ್ಯಾತರ ಎದೆಯಲ್ಲಿ ನಡುಕ ಹುಟ್ಟಿಸಲು ಎನ್ನುವಂತೆ ಅದನ್ನು ಬಿಂಬಿಸಲಾಗುತ್ತಿದೆ. ಇವರುಗಳು ಹೇಳುವುದನ್ನು ಕೇಳಿದರೆ ಭಾರತವನ್ನು ಉಗ್ರ ಹಿಂದೂ ರಾಷ್ಟ್ರವನ್ನಾಗಿ ಮಾಡಿ ಎಣೆಯಿಲ್ಲದ ದಬ್ಬಾಳಿಕೆ ನಡೆಸುವ ದಿನಕ್ಕಾಗಿ ಅದು ಕಾಯುತ್ತಿದೆಯೇನೋ ಅನ್ನಿಸುತ್ತದೆ! ಆದರೆ ಈ ರೀತಿಯ ಬ್ರ್ಯಾಂಡಿಂಗ್‌ನಿಂದಾಗಿ ಮೀಡಿಯಾಗಳಿಗಂತೂ ಲಾಭವಾಗಿದೆ. ಈಗಂತೂ ವಿದ್ಯಾವಂತ ಭಾರತೀಯರಿಗೆ ಆರ್‌ಎಸ್‌ಎಸ್‌ನ ಹೆಸರೇ ಲೇವಡಿಯ ವಿಷಯವಾಗಿ ಹೋಗಿದೆ. ಆದರೆ ಅದು ದೇಶಕ್ಕೆ ಕೊಟ್ಟ ಕೊಡುಗೆಯ ಬಗ್ಗೆ ಮಾತ್ರ ಎಲ್ಲಿಯೂ ಚರ್ಚೆಯಾಗುವುದಿಲ್ಲ.

ಯಾವುದೇ ನೈಸರ್ಗಿಕ ವಿಪತ್ತುಗಳ ಉದಾಹರಣೆಯನ್ನೇ ತಗೆದುಕೊಳ್ಳಿ. ನೆರೆ, ಬರ, ಭೂಕಂಪ, ಸುನಾಮಿ...ಯಾವುದೇ ಇರಲಿ, ಆರ್‌ಎಸ್‌ಎಸ್‌ನ ಸ್ವಯಂ ಸೇವಕರು ಆ ಸ್ಥಳಕ್ಕೆ ಎಲ್ಲರಿಗಿಂತ ಮುಂಚಿತವಾಗಿ ತಲುಪಿ ಕಷ್ಟದಲ್ಲಿರುವವರ ನೆರವಿಗೆ ಮುಂದಾಗುತ್ತಾರೆ. ಆ ಸಮಯದಲ್ಲಿ ಅವರು ತಮ್ಮ Comfort ಬಗ್ಗೆ ಯೋಚಿಸುವುದೇ ಇಲ್ಲ. ಆದರೆ ಮಾಧ್ಯಮಗಳು ಎಂದಾದರೂ ಈ ಕುರಿತು ವರದಿ ಮಾಡುತ್ತವೆಯೇ? ಇದು ಅವರ ಅಪ್ರಾಮಾಣಿಕತೆಯನ್ನು ತೋರಿಸುವುದಿಲ್ಲವೇ? ಆರ್‌ಎಸ್‌ಎಸ್‌ನ ಪ್ರಮುಖ ಶಕ್ತಿಯೆಂದರೆ ಅದರ ಸ್ವಯಂಸೇವಕರು. ಇವರುಗಳೆಲ್ಲಾ ದೇಶಕ್ಕಾಗಿ ಸ್ವಹಿತವನ್ನು ಮರೆತವರು. ಇವರುಗಳಲ್ಲಿ ಸಾವಿರಾರು ಕಾರ್ಯಕರ್ತರು ಆರಂಕಿಯ ಸಂಬಳ ಪಡೆಯುವಷ್ಟು ಅರ್ಹತೆ ಹೊಂದಿದ್ದರೂ ಕೊನೆಗೆ ಅವರು ಆಯ್ಕೆ ಮಾಡಿಕೊಂಡದ್ದು ದೇಶಸೇವೆಯನ್ನು.

ಈ ನಿಸ್ವಾರ್ಥ ಸೇವೆಯೇ ಅವರುಗಳಿಗೆ ಕೋಟ್ಯಂತರ ಭಾರತೀಯರ ಹೃದಯದಲ್ಲಿ ಭದ್ರವಾದ ಸ್ಥಾನ ಒದಗಿಸಿಕೊಟ್ಟಿದೆ. ಹಾಗಾಗೇ ಎಎನ್‌ಐ ಮತ್ತು ಅದೇ ಮನಸ್ಥಿತಿಯ ಸುದ್ದಿ ವಾಹಿನಿಗಳ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಈ ಪ್ರಮಾಣದಲ್ಲಿ ವಿರೋಧದ ಅಲೆಯೆದ್ದಿರುವುದು. ದೇಶಕ್ಕಾಗಿ ಜೀವನ ಮುಡಿಪಿಟ್ಟಿರುವ ಇಷ್ಟೊಂದು ಪ್ರಮಾಣದ ಜನರನ್ನು ಆರ್‌ಎಸ್‌ಎಸ್‌ನಂತೆ ಪ್ರಪಂಚದ ಇನ್ನಾವುದೇ ಸಂಸ್ಥೆಗೆ ಹುಟ್ಟುಹಾಕಲು, ಬೆಸೆಯಲು ಸಾಧ್ಯವಾಗಿದೆಯೇ?! ಒಂದು ವೇಳೆ ಅದು ದುರ್ಬಲ ಸಂಘವಾಗಿದ್ದರೆ ಕಾಂಗ್ರೆಸ್ ಮತ್ತು ಕಮ್ಯುನಿಸ್ಟ್ ಸರ್ಕಾರಗಳ ನಿರಂತರ ದಾಳಿಗೆ ಮೆತ್ತಗಾಗಿ ಇಷ್ಟು ಹೊತ್ತಿಗಾಗಲೇ ನೆಲಕಚ್ಚಿರುತ್ತಿತ್ತು. ತುರ್ತು ಪರಿಸ್ಥಿತಿಯ ಸಮಯದಲ್ಲಿ ಈ ಸಂಘ ತನ್ನ ಜೀವನದ ಅತ್ಯಂತ ಘೋರ ಸಮಯವನ್ನು ಎದುರಿಸಿತು. ಆದರೂ ಆಗಿನ ಸರಸಂಘಚಾಲಕರು ತಮ್ಮ ಕಾರ್ಯಕರ್ತರೊಂದಿಗೆ ಮಾತನಾಡುತ್ತಾ, ‘ಇಂದಿರಾ ಗಾಂಧಿ ಮತ್ತು ಕಾಂಗ್ರೆಸ್ ಪಕ್ಷವನ್ನು ಕ್ಷಮಿಸಿಬಿಡಿ. ಎಷ್ಟಿದ್ದರೂ ಅವರು ನಮ್ಮವರಲ್ಲವೇ?’ ಎಂದು ಹೇಳಿ ದೊಡ್ಡತನ ಮೆರೆದಿದ್ದರು!

ಭಾಗವತ್‌ರ ಖಾಕಿ ಚೆಡ್ಡಿಯ ಬಗ್ಗೆ ಗೇಲಿ ಮಾಡಿ ಅವರ ವ್ಯಕ್ತಿತ್ವವನ್ನು ಅಳೆಯಲು ಮುಂದಾಗುವ ವರದಿಗಾರರಿಗೆ ನಾವೂ ಹಾಗೇ ಗೇಲಿ ಮಾಡಬಹುದಲ್ಲವೇ? ಅವರ ತಂದೆಯದ್ದೋ, ಸೋದರಿಯದ್ದೋ ಅಥವಾ ತಾಯಿಯದ್ದೋ ಉಡುಗೆಯ ಬಗ್ಗೆ ಕುಹಕವಾಡಿದರೆ ಅವರು ಸುಮ್ಮನಿರುತ್ತಾರಾ? ‘ಅವರ ಬಗ್ಗೆ ನೀನು ಹೀಗೆ ಮಾತಾಡುವೆ ಅಂತ ನನಗೆ ಮೊದಲೇ ಗೊತ್ತಿತ್ತು’ ಎಂದು ನಾಚಿಕೆಯಿಲ್ಲದೆ ನುಣುಚಿಕೊಂಡುಬಿಡುತ್ತಾರೆ.

ಆರ್‌ಎಸ್‌ಎಸ್ ಅನ್ನು ಉಗ್ರ ಸಂಸ್ಥೆಯಂತೆ ಬಿಂಬಿಸುತ್ತಿರುವ ಮಾಧ್ಯಮ ಮಂದಿಯ ವೈಯಕ್ತಿಕ ಜೀವನವನ್ನೇ ಒಮ್ಮೆ ನೋಡಿ. ಅಲ್ಲಿ ತುಂಬಿರುವುದು ಬರೀ ಕೊಳಕು ಮಾತ್ರ. ಕಾಂಗ್ರೆಸ್ ಪರ ಪ್ರಚಾರ ಮಾಡುವುದು, ಭೂ ಕಬಳಿಕೆ, ಮೋದಿಯನ್ನು ಕಿತ್ತೆಸೆಯಬೇಕೆಂದು ಪದೇ ಪದೇ ಬೊಬ್ಬಿಡುವುದು ಇವರುಗಳ ನೈತಿಕತೆ! ಅರ್ಧ ದಿನವಾದರೂ ಭಾಗವತ್‌ರಂತೆ ಇವರುಗಳಿಗೆ ಬದುಕಲು ಸಾಧ್ಯವೇ? ಆದರೂ ನೈತಿಕತೆಯ ಉತ್ತುಂಗವನ್ನು ತಲುಪಿದವರಂತೆ ವರ್ತಿಸುತ್ತಾ ಆರ್‌ಎಸ್‌ಎಸ್, ಭಾಗವತ್‌ರನ್ನು ಹೀಗಳೆಯುತ್ತಾರೆ. ಇವರು ಯಾವ ಪ್ರಪಂಚದಲ್ಲಿ ಬದುಕುತ್ತಿದ್ದಾರೋ ತಿಳಿಯುತ್ತಿಲ್ಲ. ಅದಕ್ಕಿಂತ ಮುಖ್ಯವಾಗಿ ಇದನ್ನೆಲ್ಲಾ ಸಹಿಸಿಕೊಳ್ಳುತ್ತಾ ಕುಳಿತುಕೊಂಡಿದ್ದೇವಲ್ಲ, ನಾವ್ಯಾವ ದುಃಸ್ವಪ್ನದಲ್ಲಿ ಬದುಕುತ್ತಿದ್ದೇವೆಯೋ ತಿಳಿಯದು. ಆರ್‌ಎಸ್‌ಎಸ್ ಅನ್ನು ಪ್ರಶ್ನಿಸುವ ಹಕ್ಕು ಎಲ್ಲರಿಗೂ ಇದೆ. ಆದರೆ ಆ ಪ್ರಶ್ನೆಗಳು ಸತ್ಯ ಮತ್ತು ಪ್ರಾಮಾಣಿಕತೆಯ ತಳಹದಿಯನ್ನು ಹೊಂದಿರಬೇಕು. ಆರ್‌ಎಸ್‌ಎಸ್‌ನ ಸೈದ್ಧಾಂತಿಕ ಮತ್ತು ಬೌದ್ಧಿಕ ವೈಫಲ್ಯಗಳೇನೇ ಇದ್ದರೂ, ಅದರಂತಹ ನಿಸ್ವಾರ್ಥ ದೇಶಸೇವಾ ಮನೋಭಾವ ಪ್ರಪಂಚದಲ್ಲಿ ಯಾರಿಗೂ ಇರಲಿಕ್ಕಿಲ್ಲ. ಅದನ್ನು ಪ್ರಶ್ನಿಸುವುದಕ್ಕೆ ಸಾಧ್ಯವೂ ಇಲ್ಲ. ಹೊರಗಿನವನಾದ ನಾನೇ ಈ ಮಾತನ್ನು ಹೇಳುತ್ತಿದ್ದೇನೆ!

ಪ್ರತಿಪ್ರಶ್ನೆ

■ ಸಂದೀಪ್ ಬಾಲಕೃಷ್ಣ
deepu.sandeep@gmail.com

ದುಶ್ಚಟ ಅಪರಾಧದ ಬೆನ್ನೆಲುಬು

ದಿನ ಬೆಳಗಾದರೆ ಬರೀ ಅಪರಾಧಗಳದ್ದೇ ಸುದ್ದಿ. ದೆಹಲಿಯ ಸಾಮೂಹಿಕ ಅತ್ಯಾಚಾರ ಬೆಳಕಿಗೆ ಬಂದ ಮೇಲಂತೂ ಮೂಲೆ ಮೂಲೆಗಳಿಂದ ಇಂಥ ಪ್ರಕರಣಗಳು ಬೆಳಕಿಗೆ ಬರುತ್ತಿರುವುದು ಹೆಚ್ಚಾಗುತ್ತಿದೆ. ಅದೂ ಕರ್ನಾಟಕದ ಹಳ್ಳಿಗಳಿಂದಲೂ ಇಂಥ ಅಮಾನುಷ ಘಟನೆಗಳು ವರದಿಯಾಗುತ್ತಿರುವುದು ಅತ್ಯಂತ ಕಳವಳಕಾರಿ ಸಂಗತಿ.

ಅತ್ಯಾಚಾರ ಪ್ರಕರಣಗಳು ಬೆಳಕಿಗೆ ಬಂದ ತಕ್ಷಣವೇ ಒಂದು ರೀತಿಯ ಪ್ರತಿಕ್ರಿಯೆ ಸಿಕ್ಕರೆ, ಬರ ಬರುತ್ತಾ ಅದರ ಮಜಲುಗಳು ಬದಲಾಗುತ್ತಿವೆ. ಅನೇಕರು ತಮ್ಮ ಮನಸ್ಸಿಗೆ ಬಂದಂತೆ ಮಾತನಾಡಲು ಆರಂಭಿಸಿದ್ದಾರೆ. ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗ್ವತ್, ಅಧ್ಯಾತ್ಮ ಗುರು ಆಸೋರಾಮ್, ರಾಜ್ಯದ ಮಾತೆ ಮಹಾದೇವಿ...ಹೀಗೆ ಹಲವರು ತಮ್ಮ ಅಭಿಪ್ರಾಯಗಳನ್ನು ವಿಭಿನ್ನವಾಗಿ ಅಭಿವ್ಯಕ್ತಿಗೊಳಿಸುತ್ತಿದ್ದಾರೆ. ಅತ್ಯಾಚಾರ ವೆಸಗಲು ಬಂದವನ ಮುಂದೆ ‘ಅಣ್ಣಾ ನನ್ನ ಬಿಟ್ಟು ಬಿಡು’ ಎಂದರೆ ಸುಮ್ಮನಾಗುತ್ತಾರೆ ಎಂದು ಹೇಳುವ ಭಾಗ್ವತ್ ಅವರಿಗೆ ಸ್ವತಃ ಅಣ್ಣ, ತಂದೆಯರಿಂದಲೂ ಅನೇಕ ಹೆಣ್ಣು ಮಕ್ಕಳ ಮಾನಭಂಗವಾಗುತ್ತಿರುವುದು ತಿಳಿಯುತ್ತಿಲ್ಲವೇ? ಸರಿಯಾಗಿ ಬಟ್ಟೆ ತೊಟ್ಟರೆ ಇಂಥ ಪ್ರಕರಣಗಳನ್ನು ತಡೆಯಬಹುದು ಎಂದು ಮಾತನಾಡುವವರಿಗೆ ಎರಡು–ಮೂರು ವರ್ಷದ ಮುಗ್ಧ ಹೆಣ್ಣು ಮಕ್ಕಳ ಮೇಲೂ ಅತ್ಯಾಚಾರದಂಥ ಪೈಶಾಚಿಕ ಕೃತ್ಯಗಳು ನಡೆಯುತ್ತಿರುವುದು ಅರಿವಿಗೆ ಬಂದಿಲ್ಲವೇ? ರಾತ್ರಿ ಹೆಣ್ಣು ಓಡಾಡಬಾರದು ಎಂದು ಶರಾ ಬರೆಯುವ ಈ ಗಣ್ಯರು ಹಾಡ ಹಗಲೇ ಹೆಣ್ಣಿನ ಮಾನ ಹರಣವಾಗುತ್ತಿರವ ಸುದ್ದಿಗಳನ್ನು ಓದುತ್ತಿಲ್ಲವೇ?

ನಿಜವಾಗಿ ಮನುಷ್ಯನಲ್ಲಿ ಅಪರಾಧ ಪ್ರವೃತ್ತಿ ಹೆಚ್ಚಾಗುತ್ತಿರುವುದು ಏಕೆ ಎನ್ನುವ ಸಂಬಂಧ ಸೂಕ್ತ ಚರ್ಚೆಗಳೇ ನಡೆಯುತ್ತಿಲ್ಲ. ಅದನ್ನು ಬುಡದಲ್ಲೇ ತುಂಡರಿಸುವ ಆಲೋಚನೆಯೂ ಇದ್ದಂತಿಲ್ಲ. ಹಳ್ಳಿಗಳಲ್ಲಿ ಜನಸಂಖ್ಯೆ ಕಡಿಮೆ. ಅತ್ಯಾಚಾರದಂಥ ಪ್ರಕರಣಗಳ ಸಂಖ್ಯೆ ಸಿಟಿಗೆ ಹೋಲಿಸಿ ನೋಡಿದರೆ ಕಡಿಮೆ ಇರಬಹುದು. ಆದರೆ, ಎಲ್ಲಿ ಮಾದಕ ದ್ರವ್ಯಗಳು ವ್ಯಸನಿಗಳು ಹೆಚ್ಚಿರುತ್ತಾರೋ ಅಲ್ಲಿ ಇಂಥ ಪ್ರಕರಣಗಳು ಹೆಚ್ಚಾಗುತ್ತದೆ ಎಂಬುದರಲ್ಲಿ ಅನುಮಾನವೇ ಇಲ್ಲ. ಇಂಥ ಶೇ. 90 ಪ್ರಕರಣಗಳಲ್ಲಿ ಅಪರಾಧಿಗಳು ಮದ್ಯ ಸೇವನೆ ಮಾಡಿರುವುದೂ ದಾಖಲಾಗಿವೆ. ಮನುಷ್ಯ ಪೈಶಾಚಿಕ ಕೃತ್ಯವೆಸಗಲು ಮನಸ್ಸು ಮಾಡಬೇಕಾದರೆ ಅದಕ್ಕೆ ಆತ ವ್ಯಸನಿಯಾಗಿರಬೇಕು. ಅದರಲ್ಲೂ ಈಗೀಗ ಯಾವುದಾದರೂ ಕೃತ್ಯಗಳು ಬೆಳಕಿಗೆ ಬಂದರೆ ಬರ್ಬರತೆ ಎದ್ದು ಕಾಣುತ್ತದೆ. ಕಾಮುಕ ಕೇವಲ ತನ್ನ ತೃಷೆ ತೀರಿಸಿಕೊಳ್ಳಲು ಅತ್ಯಾಚಾರವೆಸಗಿದರೆ, ಮಾದಕ ದ್ರವ್ಯ ವ್ಯಸನಿ ಅತ್ಯಂತ ಕ್ರೂರವಾಗಿ, ಅಮಾನವೀಯವಾಗಿ ತನ್ನ ಕೃತ್ಯವನ್ನು ಮಾಡಿ ಮುಗಿಸುತ್ತಾನೆ. ಒಂದು ಹೆಣ್ಣನ್ನು ಅತ್ಯಾಚಾರವೆಸಗಿ ಕಂಡ ಕಂಡಲ್ಲಿ ಕಬ್ಬಿಣದ ರಾಡಿನಿಂದ ತಿವಿದು, ಚಲಿಸುವ ಬಸ್‌ನಿಂದ ಕಸದಂತೆ ಎಸೆದು ಹೋಗಬೇಕೆಂದರೆ ಅವರ ಮನಸ್ಥಿತಿ ಹೇಗಿರಬೇಡ ಊಹಿಸಿಕೊಳ್ಳಿ...

ಯಾವ ರಾಜ್ಯದಲ್ಲಿ ಮದ್ಯಕ್ಕೆ ಬ್ರೇಕ್ (ಉದಾ: ಗುಜರಾತ್) ಹಾಕಲಾಗಿದೆಯೋ ಅಲ್ಲಿ ಅಪರಾಧ ಪ್ರಕರಣಗಳು ಕಡಿಮೆ ಇವೆ. ಈಗೀಗ ಹದಿವಯಸ್ಸಿನ ಮಕ್ಕಳೇ ದುಶ್ಚಟಗಳಿಗೆ ಬಲಿಯಾಗುತ್ತಿರುವುದು ತೀರಾ ಆತಂಕ ತರುವ ವಿಷಯ. ದುಶ್ಚಟಗಳಿಂದ ದೂರವಿರಿ ಎಂದು ಕೇವಲ ಬಾಯಿ ಮಾತಿನಲ್ಲಿ ಹೇಳಿದರಾಗುವುದಿಲ್ಲ. ದುರಭ್ಯಾಸಕ್ಕೆ ಬಿದ್ದ ವ್ಯಕ್ತಿಗೆ ಅದೇ ಪ್ರಪಂಚವಾಗಿರುತ್ತದೆ. ಮಾರುಕಟ್ಟೆಯಲ್ಲಿ ಸುಲಭವಾಗಿ ಸಿಗುವ ವಸ್ತುವನ್ನು ಕೊಳ್ಳುವವರ ಸಂಖ್ಯೆ ಹೆಚ್ಚಿರುತ್ತದೆ. ಹಾಗೆಯೇ ಕೊಳ್ಳುವವರು ಹೆಚ್ಚಿದಂತೆ ಉತ್ಪಾದನೆಯೂ ಹೆಚ್ಚುತ್ತದೆ. ಇದರಿಂದ ಸರ್ಕಾರಕ್ಕೆ ಲಾಭ ಬರುವುದು ಹೌದಾದರೂ ನಾಗರಿಕರ ಆರೋಗ್ಯ ಹಾಳಾಗುವುದೂ ಸುಳ್ಳಲ್ಲ. ಒಂದು ಕ್ಷೇತ್ರದಲ್ಲಿ ಬಂದ ಲಾಭವನ್ನು ಮತ್ತೊಂದು ಕ್ಷೇತ್ರಕ್ಕೆ ವ್ಯಯಿಸುವುದು ಸರ್ಕಾರಕ್ಕೆ ಅನಿವಾರ್ಯವಾಗುವುದರಿಂದ ಮದ್ಯ ಲಾಭ ತರುವ ಉದ್ಯಮವಲ್ಲ.

ದುರಂತ ನೋಡಿ, ಕರ್ನಾಟಕದಲ್ಲಿ ಸರ್ಕಾರ ಸರಾಯಿ ಮಾರಾಟ ನಿಷೇಧಿಸಿದೆ. ಆದರೆ, ಸಂಪೂರ್ಣ ಮದ್ಯ ಮಾರಾಟವಲ್ಲ. ಚುನಾವಣೆಗಳಲ್ಲೂ ಮದ್ಯದ ಕರಾಮತ್ತು ನಿಲ್ಲಬೇಕು. ಮದ್ಯ ಮಾರಾಟಕ್ಕೆ ಬ್ರೇಕ್ ಹಾಕಲು ಸರ್ಕಾರಕ್ಕೆ ಒತ್ತಡ ಹೇರುವುದು ಸೂಕ್ತ ಎಂದು ಮೈಸೂರಿನಲ್ಲಿ ನಡೆದ ಸಭೆಯಲ್ಲಿ ಇತ್ತೀಚೆಗೆ ಮಠಾಧೀಶರು ಒಮ್ಮತದ ನಿರ್ಣಯ ಕೈಗೊಂಡರೆ, ಮಾಜಿ ಕೇಂದ್ರ ಸಚಿವ ಸಿ.ಎಂ. ಇಬ್ರಾಹಿಂ ಕಾಂಗ್ರೆಸ್ ಅಧಿಕಾರಕ್ಕೆ ಬಂದಲ್ಲಿ ಮತ್ತೆ ಸಾರಾಯಿ ಮಾರಲಾಗುವುದು ಎಂದು ಹೇಳಿಕೆ ನೀಡುತ್ತಾರೆ. ಹೀಗೆ ಒಬ್ಬರು ಒಂದು ನಿರ್ಣಯ ತೆಗೆದುಕೊಂಡರೆ, ಮತ್ತೊಬ್ಬರು ಮತ್ತೊಂದು ನಿರ್ಣಯ ಕೈಗೊಳ್ಳುವುದರಿಂದ ಏನೂ ಮಾಡಲು ತಾನೇ ಸಾಧ್ಯ? ಸರ್ಕಾರ ಕೇವಲ ಮದ್ಯ ನಿಷೇಧಿಸಿ ಕೈ ಕಟ್ಟಿ ಕುಳಿತರೂ ಕಷ್ಟ. ಏಕೆಂದರೆ ಕಳ್ಳಬಟ್ಟಿ ಮಾರಾಟ ಆಗುವ ಸಾಧ್ಯತೆಗಳಿರುವುದರಿಂದ ಆ ಕಡೆ ಮತ್ತಷ್ಟು ಹೆಚ್ಚಿನ ಗಮನ ನೀಡುವುದು ಸರ್ಕಾರಕ್ಕೆ ಅನಿವಾರ್ಯ. ಈ ಎಲ್ಲ ಪ್ರಕ್ರಿಯೆಗಳಲ್ಲಿ ಭ್ರಷ್ಟಾಚಾರ ಇಣುಕುವುದೂ ಸುಳ್ಳಲ್ಲ. ಒಂದಕ್ಕೊಂದಕ್ಕೆ ಲಿಂಕ್ ಇರುವುದರಿಂದ ಅಪರಾಧ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇವೆ. ಮರಣ ದಂಡನೆ ವಿಧಿಸಲಿ ಬಿಡಲಿ, ಮೊದಲು ಅದರ ಮೂಲ ಕಿತ್ತು ಹಾಕುವ ಕಡೆ ಹೆಚ್ಚಿನ ಗಮನ ನೀಡಬೇಕಾಗಿರುವುದು ಸರ್ಕಾರದ ಕರ್ತವ್ಯ. ಸಮಾಜ ಅದಕ್ಕೆ ಸಹಕರಿಸಬೇಕು.

■ ಕೆ.ಸಿ.ಸದಾನಂದ್, ಮನಃಶಾಸ್ತ್ರಜ್ಞ

ವಿಜ್ಞಾನ ಕ್ಷೇತ್ರದ ಮೇಲಿನ ಸಾಂಸ್ಕೃತಿಕ ಹಲ್ಲೆ!

ವಿಜ್ಞಾನದ ಮೇಲಿನ ಸಾಂಸ್ಕೃತಿಕ ಹಲ್ಲೆ ಆರಂಭವಾಗಿ ಎರಡು – ಮೂರು ದಶಕಗಳೇ ಆಗಿವೆ. ಈಗಲಾದರೂ ವಿಜ್ಞಾನಿಗಳು ಎಚ್ಚೆತ್ತುಕೊಳ್ಳದೇ ಹೋದರೆ ವಿಜ್ಞಾನ ಕ್ಷೇತ್ರದ ಮೇಲಿನ ಹತೋಟಿಯನ್ನು ಸಂಪೂರ್ಣವಾಗಿ ಕಳೆದುಕೊಳ್ಳಬೇಕಾದ ಸಂದರ್ಭ ಬಂದೆರಗಲಿದೆ. ಏಕೆಂದರೆ, ಕಳೆದ ಸುಮಾರು ಮೂವತ್ತು –ನಲವತ್ತು ವರ್ಷಗಳಲ್ಲಿ ಎಲ್ಲಾ ಕ್ಷೇತ್ರಗಳಲ್ಲೂ ಸರ್ಕಾರೇತರ ಸಂಸ್ಥೆಗಳು ಹುಟ್ಟಿಕೊಂಡಿವೆ. ಲಕ್ಷಾಂತರ ಸರ್ಕಾರೇತರ ಸಂಸ್ಥೆಗಳಲ್ಲಿ ಸಾಕಷ್ಟು ಸಂಸ್ಥೆಗಳು ಅತ್ಯಂತ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವುದು ಸುಳ್ಳಲ್ಲ. ಆದರೆ ಇಂತಹ ಹಲವಾರು ಸಂಸ್ಥೆಗಳು ಬರೀ ಹೆಸರಿಗಷ್ಟೇ ಎಂಬಂತಿವೆ ಮತ್ತು ಮುಕ್ಕಾಲುವಾಸಿ ಸರ್ಕಾರೇತರ ಸಂಸ್ಥೆಗಳು ಭಾರತದ ಹೊರದೇಶಗಳಿಂದ ವಂತಿಗೆ ಪಡೆಯುತ್ತವೆ. ಹಾಗಾಗೇ Paid Piper ತರಹ ಹಣ ಕೊಟ್ಟ ಸಂಸ್ಥೆಗಳ ತಾಳಕ್ಕೆ ಕುಣಿಯಬೇಕಾಗುತ್ತಿರುತ್ತದೆ. ಕೃಷಿ ಮತ್ತು ಪರಿಸರ ಕ್ಷೇತ್ರದಲ್ಲಿ ಕೆಲಸ ಮಾಡುವ ಎಷ್ಟೋ ಸರ್ಕಾರೇತರ ಸಂಸ್ಥೆಗಳು ಹೊರದೇಶಗಳಿಂದ ಹಣ ತರಿಸಿಕೊಂಡು ಕೃಷಿ ವಿಜ್ಞಾನ ಕ್ಷೇತ್ರದ ಮೇಲೆ ಅವಾಂತರ ಮಾಡಹತ್ತಿವೆ. ಈ ಅವಾಂತರಗಳನ್ನೇ ನಾನು “ಸಾಂಸ್ಕೃತಿಕ ಹಲ್ಲೆ” ಎಂದು ಕರೆಯುತ್ತಿರುವುದು. ಈ ಕೆಲಸ ಕೇವಲ ಭಾರತ ದೇಶದಲ್ಲಷ್ಟೇ ಅಲ್ಲದೆ ಪ್ರಪಂಚದ ನಾನಾ ದೇಶಗಳಲ್ಲಿಯೂ ನಡೆಯುತ್ತಿದೆ. ಅದರಲ್ಲೂ ಮುಖ್ಯವಾಗಿ ಯುರೋಪ್ ದೇಶಗಳಲ್ಲಿ ಮತ್ತು ಅಲ್ಲಿಂದ ಏಷ್ಯಾ ಮತ್ತು ಆಫ್ರಿಕಾ ಖಂಡದ ದೇಶಗಳಿಗೆ ಯುರೋಪಿಯನ್ ಯೂನಿಯನ್‌ನಿಂದ ನಿರಂತರವಾಗಿ ಹಣ ರಫ್ತು ಆಗುತ್ತಿದೆ.

ಹದಿನೇಳನೇ ಶತಮಾನದಿಂದ ವಿಜ್ಞಾನ ಕ್ಷೇತ್ರದಲ್ಲಿ ಎಂದೂ ಆಗದಂತಹ ಪ್ರಗತಿಯಾದರೂ, ಎರಡನೇ ಮಹಾಯುದ್ಧದಿಂದೀಚೆಗೆ (ಅದರಲ್ಲೂ ಹಿಟ್ಲರನ ಅಟ್ಟಹಾಸಗಳನ್ನು ಅನುಭವಿಸಿದ ನಂತರ) ಯುರೋಪಿಯನ್ನರು ಆಧುನಿಕತೆಯಲ್ಲಿ ವಿಶ್ವಾಸವನ್ನೇ ಕಳೆದುಕೊಂಡು ಬಿಟ್ಟರು. ಇಷ್ಟರಲ್ಲಿಅಮೆರಿಕ ಪ್ರಪಂಚದಲ್ಲಿ ಯಾರೂ ಕಂಡರಿಯದ, ಕೇಳರಿಯದ ಪ್ರಗತಿಯನ್ನು ಸಾಧಿಸಿ ಪ್ರಪಂಚದಲ್ಲಿ ಅತ್ಯಂತ ಅಗ್ರಗಣ್ಯ ದೇಶವಾಯಿತು. ಹೀಗಾಗಿಯೇ ಶುರುವಾದದ್ದು ಅಮೆರಿಕ–ಯುರೋಪ್‌ನ ಹಗೆಮನಿ. ಅಮೆರಿಕದ ‘ಆಧಿಪತ್ಯ’ವನ್ನು ಹತ್ತಿಕ್ಕಲು ಯುರೋಪ್ ಕಂಡುಕೊಂಡ ಮಾರ್ಗವೆಂದರೆ, ಸರ್ಕಾರೇತರ ಸಂಸ್ಥೆಗಳಿಗೆ ಹಣ ಕೊಟ್ಟು, ಅಮೆರಿಕದ ವಿರುದ್ಧ ಯುದ್ಧ ಸಾರುವುದು. ಸರ್ಕಾರಕ್ಕೆ ಮಾಡಲಾಗದ್ದನ್ನು ಸರ್ಕಾರೇತರ ಸಂಸ್ಥೆಗಳಿಂದ ಮಾಡಿಸುವ ಕೆಲಸ ನಡೆದಿದೆ. ಇದಕ್ಕೆ trans-Atlantic war ಎಂದೂ ಕರೆಯುತ್ತಾರೆ, ಮತ್ತೆ ಕೆಲವರು ಇದನ್ನು fight across the big pond ಎಂದೂ ಕರೆಯುತ್ತಾರೆ.

ಕಳೆದ ಮೂರು ದಶಕಗಳಿಂದ ನಡೆದು ಬರುತ್ತಿರುವ ವೈಜ್ಞಾನಿಕ, ಪರಿಸರ, ಕೃಷಿ ಮತ್ತು ತಂತ್ರಜ್ಞಾನಗಳಲ್ಲಿನ ರಾಜಕಾರಣಗಳನ್ನು ಸಮಗ್ರವಾಗಿ ವಿಶ್ಲೇಷಿಸಿದಾಗ, ನನಗೆ ಕಾಣಿಸಿದ್ದು ಒಂದು ‘ಪೂರ್ವಯೋಜಿತ ಪಿತೂರಿ’. ಅಮೆರಿಕ ಸೇರಿದಂತೆ ಪ್ರಪಂಚದ ಹತ್ತು–ಹನ್ನೆರಡು ಅತಿ ಶ್ರೀಮಂತ ರಾಷ್ಟ್ರಗಳು Organization for economic cooperation and Development (OECD), World Trade Organization (WTO) ಮತ್ತು ಡಾವೋಸ್‌ನಲ್ಲಿ ನಡೆಯುವ World Economic Forum (WEF)ಗಳಲ್ಲಿ ಪ್ರಪಂಚದ ಆರ್ಥಿಕ ವ್ಯವಸ್ಥೆ ಮತ್ತು ಪ್ರಗತಿಯ ಬಗ್ಗೆ ತಮ್ಮ ನಿಲವನ್ನು ವ್ಯಕ್ತಪಡಿಸಿ ಪ್ರಪಂಚದ ರೀತಿ, ನೀತಿಗಳನ್ನು ನಿರೂಪಿಸುತ್ತವೆ. ಸಾಮಾನ್ಯವಾಗಿ ಇವುಗಳು ಬಂಡವಾಳಶಾಹಿ ಮತ್ತು ಮಾರುಕಟ್ಟೆಯ ನೀತಿಗಳಿಗೆ ಹೊಂದಿಕೊಳ್ಳುವಂತಹ ನೀತಿಗಳನ್ನು ಪ್ರತಿಪಾದಿಸಿ “ಜಾಗತೀಕರಣ”ವನ್ನು ಪೋಷಿಸುತ್ತವೆ. ಇದರಿಂದಾಗಿ ಹೈರಾಣಾಗಿರುವ ಸಕಲ ವಾಮಪಂಥೀಯರು ಮತ್ತು ಸಮಾಜವಾದಿಗಳು, ಒಟ್ಟಾಗಿ ಮೇಲೆ ಹೇಳಿರುವ ಸಂಘ– ಸಂಸ್ಥೆಗಳನ್ನು ಮತ್ತು ಅವುಗಳು ಪ್ರತಿಪಾದಿಸುವ ಜಾಗತೀಕರಣ ಮತ್ತು ವ್ಯಾಪಾರೀಕರಣದ ನೀತಿ ಮತ್ತು ಸೂತ್ರಗಳನ್ನು ಹತ್ತಿಕ್ಕಲು World Social Forum (WSF) ಎಂಬ ಸಂಘವನ್ನು ಹುಟ್ಟು ಹಾಕಿದ್ದಾರೆ. ಈ WSF ಸಂಘಟನೆ ಪ್ರತಿ ವರ್ಷ WSF ಸಭೆ ಸೇರುವ ದಿನಗಳಲ್ಲೇ ಬ್ರೆಜಿಲ್‌ನ ಕುರಿಟಿಬ ಎಂಬ ಊರಿನಲ್ಲಿ ಠಿಕಾಣಿ ಹೂಡುತ್ತದೆ. ನಾ ಕಂಡಂತೆ ಪ್ರಪಂಚದ ಸಕಲ ಸರ್ಕಾರೇತರ ಮತ್ತು ವಾಮಪಂಥೀಯ ಸಂಘಟನೆಗಳೆಲ್ಲವೂ WSF ನ ಸದಸ್ಯರುಗಳು. 2004ರಲ್ಲಿ ಮಾತ್ರ WSF ಭಾರತದಲ್ಲಿ(ಮುಂಬಯಿ) ಸಭೆ ಸೇರಿತ್ತು. ಭಾರತದ ಸಮಾಜವಾದಿ ಸಂಘಟನೆಗಳು ಆಯೋಜಿಸಿದ್ದ ಈ ಸಭೆಯ ಕಳಪೆ ಆಯೋಜನೆಯಿಂದ ಬೇಸತ್ತ WSF, ಮತ್ತೇ ಕುರಿಟಿಬಕ್ಕೆ ಹೋಗಿ ಅಲ್ಲೇ ಖಾಯಂ ಆಗಿ ಮೊಕ್ಕಾಂ ಹೂಡಿದೆ. WSFನ ಮೂಲ ಉದ್ದೇಶ WSFನ ಮತ್ತು ಅದರಲ್ಲೂ “ದೊಡ್ಡಣ್ಣ” ಎಂದೆನಿಸಿಕೊಂಡಂತಹ ಅಮೆರಿಕ ದೇಶವನ್ನು ಹತ್ತಿಕ್ಕುವುದು. ಹೀಗಾಗಿ ಅಮೆರಿಕದಿಂದ ತಯಾರಾದ ವಿಜ್ಞಾನವಾಗಲೀ, ತಂತ್ರಜ್ಞಾನವಾಗಲೀ ಅಥವಾ ಕೃಷಿಯನ್ನಾಗಲೀ ವಿರೋಧಿಸುವುದು ಈ WSF ನ ಸದಸ್ಯರುಗಳಾದ ಸರ್ಕಾರೇತರ ಸಂಸ್ಥೆಗಳ ಕೆಲಸ. ಅರವತ್ತರ ದಶಕದಲ್ಲಿ ಭಾರತ, ಬರ ಮತ್ತು ಕ್ಷಾಮವನ್ನು ನಿವಾರಿಸಲು ಬೇರೆ ವಿಧಿಯಿಲ್ಲದೆ ಅಮೆರಿಕದಿಂದ ಸಹಾಯ ಪಡೆಯಿತು. ಆಗ ಬಳುವಳಿಯಾಗಿ ಬಂದದ್ದೇ ಹಸಿರುಕ್ರಾಂತಿ. ಇತ್ತೀಚೆಗೆ ಅಣುತಂತ್ರಜ್ಞಾನಕ್ಕೆ ಅಮೆರಿಕದ ಜೊತೆ ಒಪ್ಪಂದ ಮಾಡಿಕೊಂಡದ್ದಕ್ಕಾಗಿ ‘ವಾಮಪಂಥೀಯ ಒಲವಿರುವ’ ಸರ್ಕಾರೇತರ ಸಂಸ್ಥೆಗಳು ಒಪ್ಪಂದವನ್ನು ಅತಿಯಾಗಿ ವಿರೋಧಿಸಿದವು ಈಗಲೂ ವಿರೋಧಿಸುತ್ತಲೇ ಇವೆ. ಇಲ್ಲಿ ತಮಿಳುನಾಡಿನ ಕೂಡಂಕುಳಂನ ಅಣುಸ್ಥಾವರದ ವಿರೋಧಿ ಪ್ರತಿಭಟನೆಯನ್ನು ಸಂಘಟಿಸುತ್ತಿರುವ ಸರ್ಕಾರೇತರ ಸಂಸ್ಥೆಗಳನ್ನು ಸ್ಮರಿಸಬಹುದು. ಇಂದು ಭಾರತದಲ್ಲಿ ಕುಲಾಂತರಿ ತಂತ್ರಜ್ಞಾನವನ್ನು ವಿರೋಧಿಸುತ್ತಿರುವವರು ಇದೇ WSFನ ಹಿತೈಷಿಗಳಾದ ಸರ್ಕಾರೇತರ ಸಂಘಟನೆಗಳು. ಈ ವಿರೋಧದಲ್ಲಿ ವೈಜ್ಞಾನಿಕವಾದ ಯಾವ ಸತ್ವವೂ ಇಲ್ಲ. ಇದೆಲ್ಲಾ ಸುಖಾಸುಮ್ಮನೆ ಅಮೆರಿಕದ ವಿರುದ್ಧದ ಚಳವಳಿ ಮತ್ತು ಹಟಮಾರಿತನದ ರೂಪ. ನಮ್ಮ ಭಾರತಕ್ಕೆ ಲಾಭವಾಗದಿದ್ದರೂ ಪರವಾಗಿಲ್ಲ. ಆದರೆ ಅಮೆರಿಕದಿಂದ ಮಾತ್ರ ಏನನ್ನೂ ನಾವು ಪಡೆಯಬಾರದು. ಅದಕ್ಕೆ ಇವರು ಸುತಾರಾಮ್ ಒಪ್ಪುವುದಿಲ್ಲ. ರಾಜಕಾರಣಿಗಳಿಂದಾಗಿ ವಿರೋಧ ಬಂದರೆ, ಅಂತಹ ವಿರೋಧಗಳಿಗೆ ಯಾವುದೇ ನ್ಯಾಯಯುತವಾದ ಅಥವಾ ವೈಜ್ಞಾನಿಕವಾದ ಕಾರಣಗಳಿರಬೇಕಾಗಿಲ್ಲ. ಹಾಗಾಗೇ ಇವರುಗಳು ನಿರ್ಭೀತಿಯಿಂದ ವಿಜ್ಞಾನ ಮತ್ತು ತಂತ್ರಜ್ಞಾನದ ಮೇಲೆ ಹರಿಹಾಯುತ್ತಾರೆ. ಇದಕ್ಕೆ ನಾನು "Cultural war on Science" ಎಂದು ಕರೆಯುತ್ತೇನೆ.

WORLD SOCIAL FORUM

ಪ್ರಸ್ತುತ ಅಮೆರಿಕ, ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರಪಂಚದಲ್ಲೇ ಉತ್ತುಂಗ ಸ್ಥಿತಿಯಲ್ಲಿದೆ. ಬೇರಾವ ದೇಶಗಳೂ ಈ ಕ್ಷೇತ್ರಗಳಲ್ಲಿ ಅಮೆರಿಕದಷ್ಟು ಪ್ರಗತಿ ಸಾಧಿಸಲಾಗಿಲ್ಲ. ಯುರೋಪ್‌ಗಂತೂ ಈ ಪ್ರಗತಿಯನ್ನುತಡೆದುಕೊಳ್ಳಲಾರದೆ ಹೊಟ್ಟೆ ಉರಿಯುತ್ತಿದೆ. ಹಾಗಾಗೆ ಅಮೆರಿಕವನ್ನು ಹತ್ತಿಕ್ಕಲು ಅದಕ್ಕೆ ಉಳಿದಿರುವ ಒಂದೇ ಮಾರ್ಗವೆಂದರೆ ಈ ಸರ್ಕಾರೇತರ ಸಂಘಟನೆಗಳಿಗೆ ಹಣ ಒದಗಿಸಿ ಅಮೆರಿಕದ ವಿಜ್ಞಾನ ಮತ್ತು ತಂತ್ರಜ್ಞಾನದ ಮೇಲೆ ದಾಳಿ ಮಾಡಿಸಿ, ಅಭಿವೃದ್ಧಿ ಹೊಂದುತ್ತಿರುವ ಮತ್ತು ಹಿಂದುಳಿದ ರಾಷ್ಟ್ರಗಳ ಸಮಾಜದಲ್ಲಿ ಆತಂಕ ಸೃಷ್ಟಿಸುವುದು. ಈ ವಿಜ್ಞಾನ ವಿರೋಧದ ಮರ್ಮ ತಿಳಿಯಬೇಕಿದ್ದರೆ, Alex Berezow and Hank Campbell ವಿರಚಿತ "Science left Behind" Feel Good Fallacies And the Rise of the Anti-Scientific Left ಎಂಬ ಪುಸ್ತಕವನ್ನು ಓದಬೇಕು. ವಿಜ್ಞಾನ ಮತ್ತು ತಂತ್ರಜ್ಞಾನದ ವಿರೋಧದ ಬುನಾದಿ ಎಲ್ಲಿದೆ ಎಂದರೆ, ನೈಸರ್ಗಿಕತೆ, ಸಂಪೂರ್ಣ ಆರೋಗ್ಯಕಾರಿ ಆಹಾರ, ಸಾವಯವ ಆಹಾರ ಮತ್ತು ಯಾವುದೇ ಆಧುನಿಕ ತಂತ್ರಜ್ಞಾನದಿಂದ ತಯಾರಾದ ವಸ್ತುಗಳನ್ನು ಹಳಿಯುವುದು ಮತ್ತು ಯಾವುದೇ ಸಣ್ಣ, ಪುಟ್ಟ ದೋಷಗಳು ಕಂಡು ಬಂದರೆ ಅದನ್ನೇ ಎತ್ತಿ ಹಿಡಿದು ಅವುಗಳನ್ನು ಖಂಡಿಸುವುದು ಮತ್ತು ತಪ್ಪಾಗಿ ವದಂತಿಗಳನ್ನು ಹುಟ್ಟು ಹಾಕಿ ಹರಡುವುದರಲ್ಲಿ. ಇದನ್ನೇ “ಆಮಿಷ” (Seductive)ವಾದಂತಹ ದುರ್ಮಾಗಕ್ಕೆ ಎಳೆಯುವುದು ಎಂದು ಕರೆಯುತ್ತಾರೆ. ಪರಿಶುದ್ಧವಾದ ಜೀವ ರಕ್ಷ ಲಸಿಕೆಗಳನ್ನೂ ಸಹ ವಿರೋಧಿಸುವುದು ಇವರುಗಳ ಸಾಮಾನ್ಯ ಚಟುವಟಿಕೆಗಳಾಗಿ ಬಿಟ್ಟಿದೆ. ಹಾಗಾಗಿ ವಿಜ್ಞಾನ ಕ್ಷೇತ್ರವನ್ನು ಸಂಪೂರ್ಣವಾಗಿ ರಾಜಕೀಯಗೊಳಿಸಿ ಗಬ್ಬೆಬ್ಬಿಸಿದ್ದಾರೆ. ಇದಕ್ಕೆ ಸಂಸದ್ ಸಮಿತಿಯ ಕುಲಾಂತರಿ ತಂತ್ರಜ್ಞಾನ ಬಗೆಗಿನ ವರದಿ ಮತ್ತು ಸುಪ್ರಿಂ ಕೋರ್ಟ್‌ನ "Technical Experts Commitee" ವರದಿಗಳೇ ಸಾಕ್ಷಿ. ಯಾವಾಗ ವಿಜ್ಞಾನದ ಗಂಧಗಾಳಿಯೂ ಇಲ್ಲದ ರಾಜಕಾರಣಿಗಳು ಆ ಕ್ಷೇತ್ರವನ್ನು ನಿಯಂತ್ರಿಸುವುದಕ್ಕೆ ನಿಲ್ಲುತ್ತಾರೋ, ಆವಾಗ ಈ ಬೀದಿ ಹೋರಾಟದ ಸಂಘಟನೆಗಳು ಅವರನ್ನು ತಪ್ಪು ದಾರಿಗೆ ಎಳೆಯುತ್ತಾರೆ. ವಿರೋಧಿ ನೀತಿಗಳನ್ನು ರೂಪಿಸಿ ದೇಶದ ಪ್ರಗತಿ ಕುಂಟುವಂತಾಗುವಂತೆ ನೋಡಿಕೊಳ್ಳುತ್ತಾರೆ. ಭಾರತದಲ್ಲಿ ನಡೆಯುತ್ತಿರುವ ಬಹುತೇಕ ವಿಜ್ಞಾನ ಮತ್ತು ತಂತ್ರಜ್ಞಾನ ವಿರೋಧಿ ಆಂದೋಲನಗಳನ್ನು ಸಾಂಸ್ಕೃತಿಕ ಹಲ್ಲೆ ಎಂದು ಕರೆಯದೇ ವಿಧಿಯೇ ಇಲ್ಲ. ದೇಶದ ವಿಜ್ಞಾನಿಗಳು ಮತ್ತು ತಂತ್ರಜ್ಞರು ಈ ಸಾಂಸ್ಕೃತಿಕ ಹಲ್ಲೆಯನ್ನು ಗಂಭೀರವಾಗಿ ಪರಿಗಣಿಸಿ, ಈ ಹೊಸ ವರ್ಷದಲ್ಲಿ ಈ ತರಹದ ಹಲ್ಲೆಯನ್ನು ಹತ್ತಿಕ್ಕಲು ಪಣ ತೊಡಬೇಕೆಂಬುದು ನನ್ನ ಆಸೆ.



ಹಚ್ಚ ಹಸಿರು

■ ಪ್ರೊ. ಶಾಂತು ಶಾಂತಾರಾಮ್
ಐಯೋವ ರಾಜ್ಯ ಕೃಷಿ ವಿವಿ
Shanthus@iastate.edu

ಪದ ಪದರ

ವಿಶ್ವನಾಥ ಸುಂಕಸಾಳ
vishwasunkasal@yahoo.com

ಸಲಾಮು

- ಕಲಾಂರಂಥವರಿಗೆ ಸಲ್ಲಬೇಕಾದದ್ದು
- ಬಾಸ್‌ನ ಜಂಭಕ್ಕೆ ಇದೇ ಮುಲಾಮು
- ಗುಲಾಮಗಿರಿಯ ಪ್ರತೀಕವಿದು
- ಮೊದಲ ಕಾಲದಲ್ಲಿ ‘ಬಕೆಟ್ ಹಿಡಿಯಲು’ ಇದನ್ನೇ ಬಳಸುತ್ತಿದ್ದರು
- ಸಲೀಮನ ಮೇಲಿನ ಗೌರವ ಸೂಚಿಸಲ್ಪಡುವ ಮಾಧ್ಯಮ
- ಸುಮ್ಮ ಸುಮ್ಮನೆ ಸಲಾಮು ಹೊಡೆಯುವವರು ಭವಿಷ್ಯದಲ್ಲಿ ನಿಮ್ಮ ಸಾಲಗಾರರಾಗಬಹುದು
- ಮಂತ್ರಿ ಮಹೋದಯರ ತುಷ್ಟಿಕಾರಕ
- ಲೂಟ್ ಮಾಡಿಯೂ ಗೆದ್ದು ಮಂತ್ರಿಯಾದವರಿಗೆ ಹೊಡೆಯಬೇಕಾದ ಸೆಲ್ಯೂಟ್
- ಕಂಡ ಕಂಡವರಿಗೆಲ್ಲ ಸಲಾಮು ಹೊಡೆಯುವ ಮನಸ್ಸಿನೊಳಗೇ ಗುಲಾಮನಾಗಿದ್ದಾನೆಂದರ್ಥ
- ಮಂತ್ರಿಗೆ ಸಲಾಮು ಹೊಡೆಯದ ತನಕ ದೊರೆಯದಣ್ಣ ಪ್ರಮೋಷನ್
- ಈ ವಿಷಯದಲ್ಲಿ ಎಲ್ಲರೂ ಹೊಡೆಸಿಕೊಳ್ಳಲು ಬಯಸುವವರೇ
- ಗುರಿ ದೊಡ್ಡದಿದ್ದು ಕೈ ಗಿಡ್ಡವಿದ್ದವರಿಗೆ ಸಾಧನೆಗೆ ಇದೊಂದು ಉತ್ತಮ ಸಾಧನ
- ಸರ್ಕಾರಿ ಬಕೆಟ್